ಕೆಎ/ಎಸ್‌ಕೆ/ಎಂವೈಎಸ್/108/2012–15
ಆರ್. ಎನ್.ಐ. ನಂ. 3577/1957

ಸಂಪಾದಕರು : ಎಂ.ಟಿ.ಜಯರಾಮ್
Editor : M.T.JAYARAM

# ವರ್ತಮಾನ್
# VARTHAMAN

KA/SK/MYS/108/2012-15
R.N.I. No. 3577/1957

ಕನ್ನಡ ಸಂಜೆ ದಿನಪತ್ರಿಕೆ
Kannada Daily Evening

ಸಂಪುಟ : 72 | ಸಂಚಿಕೆ : 36 | ಶನಿವಾರ | ಮೈಸೂರು | 13ನೇ ಜುಲೈ – 2019 | ಪುಟ: 2 | ಬೆಲೆ : ರೂ. 1-00
Volume : 72 | Issue : 36 | Saturday | Mysore | 13th July - 2019 | Page: 2 | price : Rs.1-00

# ಪ್ರಾದೇಶಿಕವಾಗಿ ಶಿಕ್ಷಣದಲ್ಲಿ ದೇಶ ಸದೃಢವಾಗಬೇಕು

## ಪ್ರಾದೇಶಿಕ ಶಿಕ್ಷಣ ಸಂಸ್ಥೆಯಲ್ಲಿ ಡಾ.ಎಸ್.ರಾಧಾಕೃಷ್ಣನ್ ಸಭಾಭವನ ಶಂಕುಸ್ಥಾಪನೆ

**ಮೈಸೂರು,ಜು.೧೩:-** ಪ್ರಾದೇಶಿಕವಾಗಿ ಶಿಕ್ಷಣದಲ್ಲಿ ದೇಶ ಸದೃಢವಾಗಬೇಕು ಎಂದು ಉಪರಾಷ್ಟ್ರಪತಿ ಎಂ.ವೆಂಕಯ್ಯ ನಾಯ್ಡು ತಿಳಿಸಿದರು.

ಅವರಿಂದು ಮೈಸೂರಿನ ಪ್ರಾದೇಶಿಕ ಶಿಕ್ಷಣ ಸಂಸ್ಥೆಯಲ್ಲಿ ಡಾ.ಎಸ್. ರಾಧಾಕೃಷ್ಣನ್ ಸಭಾಭವನದ ಶಂಕುಸ್ಥಾಪನೆ ನೆರವೇರಿಸಿದರು. ರಾಜ್ಯಪಾಲ ವಜುಭಾಯಿ ರೂಡಾಭಾಯಿ ವಾಲಾರ ಅನುಪಸ್ಥಿತಿಯಲ್ಲಿ ಶಂಕುಸ್ಥಾಪನೆ ನೆರವೇರಿಸಿದರು.




ಕನ್ನಡದಲ್ಲೇ ಭಾಷಣ ಆರಂಭಿಸಿದ ಉಪರಾಷ್ಟ್ರಪತಿ ವೆಂಕಯ್ಯ ನಾಯ್ಡು ಅವರು ಸಭಿಕರನ್ನು ಕನ್ನಡದಲ್ಲೇ ಸಂಬೋಧಿಸಿದರು. ಭಾರತೀಯ ಹೆಮ್ಮೆಯ ಪುತ್ರನ ಹೆಸರಿನ ಸಭಾಂಗಣಕ್ಕೆ ಶಂಕುಸ್ಥಾಪನೆ ಮಾಡಿದ್ದು ನನಗೆ ಖುಷಿ ನೀಡಿದೆ. ಪ್ರಾದೇಶಿಕವಾಗಿ ಶಿಕ್ಷಣದಲ್ಲಿ ದೇಶ ಸದೃಢವಾಗಬೇಕು. ಇದು ರಾಷ್ಟ್ರಪಿತ ಮಹಾತ್ಮಗಾಂಧಿ ಅವರ ಚಿಂತನೆಯಾಗಿತ್ತು. ಇಂದು ಶಿಕ್ಷಣ ಎಂಬುದು ಕೇವಲ ಉದ್ಯೋಗಕ್ಕಾಗಿ ಎನ್ನುವಂತಾಗಿದೆ ಎಂದು ಬೇಸರ ವ್ಯಕ್ತಪಡಿಸಿದರಲ್ಲದೇ, ಶಿಕ್ಷಣ ನಮ್ಮಲ್ಲಿ ಆತ್ಮವಿಶ್ವಾಸ ಹೆಚ್ಚಿಸುತ್ತದೆ. ಶಿಕ್ಷಣದಿಂದ ಉದ್ಯಮ ನಡೆಸಲು, ಸ್ವತಂತ್ರವಾಗಿ ಉದ್ಯೋಗ ನಡೆಸಲು, ಇತರರಿಗೆ ಉದ್ಯೋಗ ನೀಡಲು ಸಾಧ್ಯವಿದೆ. ಬಾಲ್ಯದ ದಿನಗಳು, ರಜೆಯ ಮಜಾ ಸಮಯ, ಎಲ್ಲರೊಂದಿಗೆ ಬೆರೆಯುವ ಕಲೆಯ ಬಗ್ಗೆ ಪಾಠ ಮಾಡಿದರು.

ಜಾಗತೀಕರಣದ ಯುಗದಲ್ಲಿ ನಾವು ಎಲ್ಲರಿಗೂ ಗುಣಮಟ್ಟ ಮತ್ತು ಸಮಾನತೆ ನೀಡುವತ್ತ ಶ್ರಮಿಸುತ್ತಿರುವುದರಿಂದ ಭಾರತೀಯ ಶಿಕ್ಷಣ ವ್ಯವಸ್ಥೆಯು ಇಂದು ನಿರ್ಣಾಯಕ ಹಂತವನ್ನು ದಾಟುತ್ತಿದೆ. ಶಾಲೆ, ಶಿಕ್ಷಕ ಮತ್ತು ಉನ್ನತ ಶಿಕ್ಷಣದಲ್ಲಿ ನಾವು ಭಾರೀ ಪ್ರಗತಿ ಸಾಧಿಸಿದ್ದೇವೆ. ದಾಖಲಾತಿ ದರಗಳು ಗಮನಾರ್ಹವಾಗಿ ಹೆಚ್ಚಾಗಿದೆ, ಮೂಲಸೌಕರ್ಯ ಸೌಲಭ್ಯಗಳು ಮಹತ್ತರವಾಗಿ ಸುಧಾರಿಸಿದೆ ಎಂದು ತಿಳಿಸಿದರು.

ನಾವು ಪ್ರತಿವರ್ಷ ವಾರ್ಷಿಕ ಪರೀಕ್ಷೆಗಳಲ್ಲಿ ಯಶಸ್ವಿಯಾಗಲು ನಮ್ಮ ಮಕ್ಕಳನ್ನು ಹೇಗೆ ಸಿದ್ಧಪಡಿಸುತ್ತೇವೆಯೋ ಅದೇ ರೀತಿ ಅಗತ್ಯವಾದ ಜೀವನ-ಕೌಶಲ್ಯಗಳನ್ನು ಒದಗಿಸುವ ಮೂಲಕ ಜೀವನದಲ್ಲಿ ವಿವಿಧ ಸವಾಲುಗಳನ್ನು ಎದುರಿಸಲು ಅವರನ್ನು ಸಿದ್ಧಪಡಿಸುವುದು ಅಷ್ಟೇ ಮುಖ್ಯವಲ್ಲವೇ? ವಿದ್ಯಾರ್ಥಿಗಳನ್ನು ಶಿಕ್ಷಣ ತಜ್ಞರಲ್ಲಿ ಶ್ರೇಷ್ಠರನ್ನಾಗಿ ಮಾಡುವಾಗ, ಒಟ್ಟಾರೆ ವ್ಯಕ್ತಿತ್ವ ವಿಕಸನದತ್ತ ಗಮನ ಹರಿಸಬೇಕು. ಅದೇ ಸಮಯದಲ್ಲಿ, ಪ್ರತಿ ವಿದ್ಯಾರ್ಥಿಯ ವೈಯಕ್ತಿಕ ಪ್ರತಿಭೆ ಪ್ರಕಾಶಿಸುವಂತೆ ನೋಡಿಕೊಳ್ಳಬೇಕೆಂದರು.

ಆಧುನಿಕ ಯುಗದ ಶಿಕ್ಷಕರು ಬೋಧನೆ ಮತ್ತು ಕಲಿಕೆಯ ವಿಧಾನಗಳ ಬಗ್ಗೆ ನವೀಕೃತವಾಗಿರಬೇಕು ಮಾತ್ರವಲ್ಲದೆ, ಪಠ್ಯಕ್ರಮ, ಪಠ್ಯಪುಸ್ತಕಗಳು ಮತ್ತು ಬೋಧನೆ-ಕಲಿಕಾ ಸಾಮಗ್ರಿಗಳ ತಯಾರಿಕೆಯಲ್ಲಿ ಸಕ್ರಿಯವಾಗಿ ಭಾಗವಹಿಸಬೇಕು. ಶಿಕ್ಷಕರು ಪಠ್ಯಕ್ರಮ, ವಿಷಯ-ವಿಷಯ ಮತ್ತು ಶಿಕ್ಷಣಶಾಸ್ತ್ರದ ಬಗ್ಗೆ ಒಂದು ಕಡೆ, ಮತ್ತು ಸಮುದಾಯ ಮತ್ತು ಶಾಲಾ ರಚನೆಗಳು ಮತ್ತು ನಿರ್ವಹಣೆಯ ಬಗ್ಗೆ ಸಮರ್ಪಕ ತಿಳುವಳಿಕೆಯನ್ನು ಹೊಂದಿರಬೇಕು. ಹಾಗಿದ್ದಾಗ ಶಿಕ್ಷಕರು ಮಕ್ಕಳೊಂದಿಗೆ ಸಂಪರ್ಕ ಸಾಧಿಸಲು ಮತ್ತು ಅವರ ಅಗತ್ಯಗಳಿಗೆ ಕಾಲ್ಪನಿಕ ರೀತಿಯಲ್ಲಿ ಸ್ಪಂದಿಸಲು ಸಾಧ್ಯವಾಗುತ್ತದೆ. ಅವರು ಜ್ಞಾನದ ಸೃಷ್ಟಿಕರ್ತರಾಗಿರಬೇಕು, ಮಕ್ಕಳು ತಮ್ಮ ಮನೆ, ಸಾಮಾಜಿಕ ಮತ್ತು ಸಾಂಸ್ಕೃತಿಕ ವಾತಾವರಣದಿಂದ ಕಲಿಯುವದನ್ನು ಮೌಲ್ಯೀಕರಿಸಬೇಕು ಮತ್ತು ಮಕ್ಕಳಿಗೆ ತಮ್ಮ ಪೂರ್ಣ ಸಾಮರ್ಥ್ಯವನ್ನು ಕಂಡುಹಿಡಿಯಲು, ಕಲಿಯಲು ಮತ್ತು ವಿಕಸನಕ್ಕೆ ಅವಕಾಶಗಳನ್ನು ಸೃಷ್ಟಿಸಬೇಕು ಎಂದರು.

ಶಿಕ್ಷಕರ ಪೂರ್ವ-ಸೇವೆ ಮತ್ತು ಸೇವೆಯಲ್ಲಿನ ತರಬೇತಿ ಎರಡೂ ಪ್ರಸ್ತುತ ಕಾಳಜಿಯ ಪ್ರಮುಖ ಕ್ಷೇತ್ರವಾಗಿದೆ. ಸೇವಾ-ಪೂರ್ವ ತರಬೇತಿಯನ್ನು ಸರ್ಕಾರಿ ವಲಯಗಳು ಮತ್ತು ಖಾಸಗಿ ಸಂಸ್ಥೆಗಳಲ್ಲಿ ಸುಧಾರಿಸಬೇಕು ಮತ್ತು ವಿಭಿನ್ನವಾಗಿ ನಿಯಂತ್ರಿಸಬೇಕಾಗುತ್ತದೆ, ಆದರೆ ಸೇವೆಯಲ್ಲಿನ ತರಬೇತಿಗಾಗಿ ವ್ಯವಸ್ಥೆಗಳಿಗೆ ವಿಸ್ತರಣೆ ಮತ್ತು ಪ್ರಮುಖ ಸುಧಾರಣೆಯ ಅಗತ್ಯವಿರುತ್ತದೆ.

ಪೋಷಕರು ಶಿಕ್ಷಣದಲ್ಲಿ ಪ್ರಮುಖ ಪಾಲುದಾರರಾಗಿದ್ದಾರೆ. ಅವರಿಗೆ ಶಿಕ್ಷಣದ ಮಹತ್ವ ಮತ್ತು ವ್ಯಾಪ್ತಿಯ ಬಗ್ಗೆ ಅರಿವು ಮೂಡಿಸಬೇಕು. ಮಕ್ಕಳ ಮೇಲೆ ಪೋಷಕರ ಮಹತ್ವಾಕಾಂಕ್ಷೆಗಳನ್ನು ಹೇರುವುದು ಮತ್ತು ಸಾರ್ವಕಾಲಿಕವಾಗಿ ಉತ್ಕೃಷ್ಟರಾಗುವಂತೆ ಒತ್ತಡ ಹೇರುವುದು ಸಮಾಜದಲ್ಲಿ ಆರೋಗ್ಯಕರ ಬೆಳವಣಿಗೆಗಳಲ್ಲ. ವಿದ್ಯಾರ್ಥಿಗಳಲ್ಲಿ ಸೃಜನಶೀಲತೆಗೆ ಅವಕಾಶ ನೀಡಬೇಕು ಎಂದರು. ೨೧ ನೇ ಶತಮಾನದ ಭಾರತವನ್ನು ಜ್ಞಾನ ಮತ್ತು ಇನ್ನೋವೇಶನ್ ಹಬ್ ಮಾಡಲು ಸಾಮೂಹಿಕವಾಗಿ ಶ್ರಮಿಸಿ ಎಂದು ಶಿಕ್ಷಕರಿಗೆ ಕರೆ ನೀಡಿದರು.

ಈ ಸಂದರ್ಭ ಎನ್‌ಸಿಇಆರ್‌ಟಿಯ ನಿರ್ದೇಶಕ ಪ್ರೊ.ಹೆಚ್.ಕೆ.ಸೇನಾಪತಿ, ಆರ್‌ಐಇಎಂ ಪ್ರಾಂಶುಪಾಲ ಪ್ರೊ.ವೈ ಶ್ರೀಕಾಂತ್ ಮತ್ತಿತರರು ಉಪಸ್ಥಿತರಿದ್ದರು. ಆಡಿಟೋರಿಯಂ ೧೦೦೦ ಆಸನಗಳ ಸಾಮರ್ಥ್ಯ ಹೊಂದಿದೆ.

# ಹದಿಹರೆಯದಲ್ಲಿ ಮಕ್ಕಳು ಒಳ್ಳೆ ವಿಚಾರಶೀಲರಾದರೆ ಭವಿಷ್ಯ ಉತ್ತಮವಾಗುತ್ತದೆ : ಡಾ. ಪಾಂಡುರಂಗ

ಮೈಸೂರು,ಜು.೧೩:- ಸುತ್ತೂರು ಜೆಎಸ್‌ಎಸ್ ವಸತಿ ಶಾಲೆಯು ಮಕ್ಕಳಿಗೆ ವಿದ್ಯೆಯೊಂದಿಗೆ ಸಂಸ್ಕೃತಿ ಸಂಸ್ಕಾರಗಳನ್ನು ಕಲಿಸುತ್ತದೆ ಎಂದು ಮೈಸೂರು ಜಿಲ್ಲೆಯ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರಾದ (ಆಡಳಿತ) ಡಾ. ಪಾಂಡುರಂಗ ಅವರು ಮೆಚ್ಚುಗೆ ವ್ಯಕ್ತಪಡಿಸಿದರು.

ಶಾಲೆಯ ವಿದ್ಯಾರ್ಥಿ ಸಂಘದ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ರಾಷ್ಟ್ರಕ್ಕೆ ಮಹತ್ತರ ಕೊಡುಗೆ ನೀಡುತ್ತಿರುವ ಶ್ರೀಮಠದ ಆಶ್ರಯದಲ್ಲಿ ಕಲಿಯುತ್ತಿರುವ ನೀವು ನಿಜಕ್ಕೂ ಪುಣ್ಯವಂತರು. ವಿದ್ಯಾವಂತರು ತಂದೆ ತಾಯಿಯರಿಗೆ, ಗುರುಹಿರಿಯರಿಗೆ ಗೌರವ ನೀಡುವುದನ್ನು ಕಲಿಯಬೇಕು. ನಾವು ಎಷ್ಟೇ ದೊಡ್ಡವರಾದರೂ ಕಲಿತ ಶಾಲೆ ಮತ್ತು ಕಲಿಸಿದ ಗುರುಗಳನ್ನು ಮರೆಯಬಾರದು. ಗುಣಾತ್ಮಕ ಶಿಕ್ಷಣವನ್ನು ಪಡೆದು ಉತ್ತಮ ನಾಗರೀಕರಾಗಬೇಕು. ಹದಿಹರೆಯದಲ್ಲಿ ಮಕ್ಕಳು ಒಳ್ಳೆ ವಿಚಾರಶೀಲರಾದರೆ ಭವಿಷ್ಯ ಉತ್ತಮವಾಗುತ್ತದೆ. ಉತ್ತಮ ಸಾಧನೆ ಮಾಡುವ ಮೂಲಕ ಸಮಾಜಕ್ಕೆ ಏನಾದರೂ ಕೊಡಗೆ ನೀಡುವಂತಾದಾಗ ಇಂತಹ ಶಾಲೆಗಳಲ್ಲಿ ವಿದ್ಯಾಭ್ಯಾಸ ಮಾಡಿದ್ದು ಸಾರ್ಥಕವಾಗುತ್ತದೆ ಎಂದು ನುಡಿದರು.

ಸುತ್ತೂರು ಜೆಎಸ್‌ಎಸ್ ವಸತಿ ಶಾಲೆಯ ವಿದ್ಯಾರ್ಥಿ ಸಂಘವನ್ನು ಉದ್ಘಾಟಿಸಿ ಮಾತನಾಡಿದ ನಂಜನಗೂಡು ಉಪ ವಿಭಾಗದ ಡೆಪ್ಯೂಟಿ ಸೂಪರಿಂಟೆಂಡೆಂಟ್ ಆಫ್ ಪೊಲೀಸ್ ಸಿ. ಮಲ್ಲಿಕ್ ಮಾತನಾಡಿ ವಿದ್ಯಾರ್ಥಿಗಳು ಉತ್ತಮ ಹವ್ಯಾಸಗಳನ್ನು ರೂಢಿಸಿಕೊಳ್ಳುವ ಮೂಲಕ ಉತ್ತಮ ಭವಿಷ್ಯವನ್ನು ರೂಪಿಸಿಕೊಳ್ಳಬೇಕು ಎಂದು ವಿದ್ಯಾರ್ಥಿಗಳಿಗೆ ಕಿವಿ ಮಾತು ಹೇಳಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಚಾಮರಾಜನಗರ ತಾಲೂಕು ಹೊನ್ನಹಳ್ಳಿ ಗ್ರಾಮದ ಉದ್ಯಮಿಗಳಾದ ಹೆಚ್.ಎಂ. ಪುಟ್ಟಮಾದಪ್ಪ ಮಾತನಾಡಿ ವಿದ್ಯೆ ಯಾರೂ ಕದಿಯಲಾಗದ ಸಂಪತ್ತು. ಆದ್ದರಿಂದ ವಿದ್ಯಾವಂತರು ದೇಶದ ಆಸ್ತಿಯಾಗಬೇಕು ಎಂದು ನುಡಿದರು.

ಸಮಾರಂಭದಲ್ಲಿ ಮಾಲಂಗಿ ಸುರೇಶ್, ಸೋಮಶೇಖರಗೌಡ, ಸಂಯೋಜನಾಧಿಕಾರಿ ಜಿ.ಎಲ್. ತ್ರಿಪುರಾಂತಕ, ಜೆಎಸ್‌ಎಸ್ ಸಂಸ್ಥೆಯ ಮುಖ್ಯಸ್ಥರುಗಳಾದ ಸಂಪತ್ತು, ವೀರಭದ್ರಯ್ಯ, ಜಿ.ಶಿವಮಲ್ಲು, ಸಿ.ಪಿ. ನಿರ್ಮಲ, ಬಿ.ಎಂ.ಸಿದ್ಧಪ್ಪ ಜಿ.ಎಂ. ಷಡಕ್ಷರಿ ಮುಂತಾದವರು ಉಪಸ್ಥಿತರಿದ್ದರು.

ಶಾಲಾ ಮಕ್ಕಳು ಪ್ರಾರ್ಥಿಸಿದರು, ದಯಾನಂದ ಸ್ವಾಮಿ ಸ್ವಾಗತಿಸಿದರು. ಎಂ. ಪರಮೇಶ್ ವಂದಿಸಿದರು, ಎಸ್. ಚಂದ್ರಮೌಳೇಶ್ವರ ನಿರೂಪಿಸಿದರು.



## ಭಾರತೀಯ ಭಾಷಾ ಸಂಸ್ಥಾನದಲ್ಲಿ ಸ್ವರ್ಣ ಜಯಂತಿ ಸಮಾರಂಭ : ಜನರಲ್ ಕ್ಲಾಸಿಕಲ್ ತೆಲಗು ಪುಸ್ತಕ ಲೋಕಾರ್ಪಣೆಗೊಳಿಸಿದ ಉಪರಾಷ್ಟ್ರಪತಿ



**ಮೈಸೂರು,ಜು.೧೩:-** ಭಾರತೀಯ ಭಾಷಾ ಸಂಸ್ಥಾನದಲ್ಲಿಂದು ಸ್ವರ್ಣ ಜಯಂತಿ ಸಮಾರಂಭವನ್ನು ಇಂದು ಹಮ್ಮಿಕೊಳ್ಳಲಾಗಿತ್ತು.

ಸಮಾರಂಭಕ್ಕೆ ಉಪರಾಷ್ಟ್ರಪತಿ ಎಂ.ವೆಂಕಯ್ಯ ನಾಯ್ಡು ಚಾಲನೆ ನೀಡಿದರು. ತದನಂತರ ಜನರಲ್ ಕ್ಲಾಸಿಕಲ್ ತೆಲಗು ಪುಸ್ತಕ ಲೋಕಾರ್ಪಣೆಗೊಳಿಸಿದರು. ಬಳಿಕ ಭಾರತೀಯ ಭಾಷಾ ಸಂಸ್ಥಾನದಲ್ಲಿ ನಡೆಯುತ್ತಿರುವ ಸ್ವರ್ಣ ಜಯಂತಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದು ನನಗೆ ಖುಷಿ ತಂದಿದೆ ಎಂದರು.

ಇದೇ ವೇಳೆ ಉಪರಾಷ್ಟ್ರಪತಿ ವೆಂಕಯ್ಯ ನಾಯ್ಡು ಅವರಿಗೆ ಮೈಸೂರು ಪೇಟ ತೊಡಿಸಿ, ಹಾರ ಹಾಕಿ, ಸ್ಮರಣಿಕೆ ನೀಡಿ ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಸಂಸದ ಪ್ರತಾಪ್ ಸಿಂಹ,ಮೇಯರ್ ಪುಷ್ಪಲತಾ ಜಗನ್ನಾಥ್, ಸಂಜಯ್,ಡಿ.ಜಿ.ರಾವ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ರಾಜೀನಾಮೆ ವಾಪಸ್ಸಿಗೆ ಸಮಯ ಕೇಳಿದ ಎಂಟಿಬಿ

**ಬೆಂಗಳೂರು:** ಸತತವಾಗಿ ಸುಮಾರು ೭ ಗಂಟೆಯಿಂದ ಕಾಂಗ್ರೆಸ್ ನಾಯಕರು ಎಂಟಿಬಿ ನಾಗರಾಜ್ ಅವರನ್ನು ಮನವೊಲಿಸುವ ಪ್ರಯತ್ನ ಮಾಡಿದ್ದು, ಕೊನೆಗೂ ಅವರ ಪ್ರಯತ್ನ ಸಫಲವಾಗಿದೆ. ಎಂಟಿಬಿ ನಾಗರಾಜ್ ಅವರು ರಾಜೀನಾಮೆ ವಾಪಸ್ ಪಡೆಯಲು ಸಮಯ ಕೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಎಂಟಿಬಿ, ನಮ್ಮ ಕಾಂಗ್ರೆಸ್ ಪಕ್ಷದ ನಾಯಕರುಗಳು ಡಿ.ಕೆ ಶಿವಕುಮಾರ್, ಪರಮೇಶ್ವರ್, ಕೃಷ್ಣಬೈರೇಗೌಡ ಸೇರಿದಂತೆ ಅನೇಕರು ನಮ್ಮ ಮನೆಗೆ ಬಂದಿದ್ದರು. ನಾನು ಅವರನ್ನು ಅಭಿಮಾನ ಪೂರಕವಾಗಿ ಸ್ವಾಗತ ಮಾಡಿದ್ದೇನೆ. ನಾನು ಕೂಡ ಅವರ ಮಾರ್ಗದರ್ಶನದಲ್ಲಿ ಬೆಳೆದು ಬಂದಿದ್ದೇನೆ. ಬೇಸರದಿಂದ ನಾನು ಶಾಸಕ ಸ್ಥಾನಕ್ಕೆ ರಾಜೀನಾಮೆ ಕೊಟ್ಟಿದ್ದೇನೆ. ನೀವು ೪೦ ವರ್ಷದಿಂದ ಸತತವಾಗಿ ಕಾಂಗ್ರೆಸ್ ಪಕ್ಷದಿಂದ ಕೆಲಸ ಮಾಡಿದ್ದೀರಿ. ನೀವು ಇಲ್ಲೇ ಉಳಿದುಕೊಳ್ಳಬೇಕು. ಕಾಂಗ್ರೆಸ್ ಬಿಟ್ಟು ಹೋಗಬಾರದು ಎಂದು ಮನವೊಲಿಸಲು ಇಷ್ಟು ನಾಯಕರುಗಳು ಬಂದಿದ್ದರು ಎಂದರು.

ಕೆಲ ಗಂಟೆಗಳ ಕಾಲ ಚರ್ಚೆ ಮಾಡಿದ್ದೇವೆ. ನಾನು, ಸುಧಾಕರ್ ಸ್ಪೀಕರ್ ಕಚೇರಿಗೆ ಹೋಗಿ ರಾಜೀನಾಮೆ ಕೊಟ್ಟಿದ್ದೇವೆ. ನೀವು ರಾಜೀನಾಮೆ ವಾಪಸ್ ಪಡೆದುಕೊಳ್ಳಬೇಕು ಎಂದು ನಮ್ಮ ನಾಯಕರಾದ ಸಿದ್ದರಾಮಯ್ಯ ಅವರು ಕೂಡ ದೂರವಾಣಿ ಮೂಲಕ ಹೇಳಿದ್ದಾರೆ.

